೫) ಅಥಣಿ ತಾಲ್ಲೂಕಿನಲ್ಲಿ ವಿಫಲವಾದ ಕೊಳವೆ ಬಾವಿಗಳು

೧೯೮೪-೮೫ರಲ್ಲಿ	೧೫	ಕೊಳವೆ ಬಾವಿಗಳು
೧೯೮೫-೮೬ರಲ್ಲಿ	೧೫	ಕೊಳವೆ ಬಾವಿಗಳು
೧೯೮೬-೮೭ರಲ್ಲಿ	೬	ಕೊಳವೆ ಬಾವಿಗಳು
ಒಟ್ಟು	೩೬	

ಅಥಣಿ ವಿಧಾನಸಭೆ ಕ್ಷೇತ್ರದಲ್ಲಿ ವಿಫಲವಾದ ಕೊಳವೆ ಬಾವಿಗಳು

೧೯೮೪-೮೫ರಲ್ಲಿ	೭	ಕೊ. ಬಾವಿಗಳು
೧೯೮೫-೮೬ರಲ್ಲಿ	೯	ಕೊ. ಬಾವಿಗಳು
೧೯೮೬-೮೭ರಲ್ಲಿ	೩	ಕೊ. ಬಾವಿಗಳು
ಒಟ್ಟು	೧೯	

ವಿಫಲಗೊಂಡಿರುವ ಕೊಳವೆ ಬಾವಿಗಳನ್ನು ಭೂಗರ್ಭ ತಜ್ಞರಿಂದ ಪುನ: ಪರಿಶೀಲನೆ ಮಾಡಿಸಿ ಯಶಸ್ವಿನ ಸಾಧ್ಯತೆ ಇದ್ದಲ್ಲಿ ಅಂತಹಾವಿಗಳನ್ನು ಆಳಮಾಡಿ ಸಫಲವಾಗುವಂತೆ ಪರಿವರ್ತಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಟಿ. ನರಸಿಪುರದಲ್ಲಿ ಕರ್ನಾಟಕ ಗೃಹ ಮಂಡಳಿಯ ವಸತಿ ಯೋಜನೆ

೭೬೧. ಶ್ರೀ ಹೆಚ್. ಸಿ. ಮಹದೇವಪ್ಪ (ಟಿ.ನರಸೀಪುರ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಟಿ. ನರಸೀಪುರದಲ್ಲಿ ಗೃಹ ಮಂಡಳಿಯಿಂದ ಗೃಹ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಈ ಯೋಜನೆಗೆ ಸರ್ಕಾರವು ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿ ಕೊಂಡಿದೆ. ಹಾಗೂ ನಿರ್ಮಾಣ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).

ಅ) ಇಲ್ಲ

ಆ) ಕರ್ನಾಟಕ ಗೃಹ ಮಂಡಳಿಯು ಸುಮಾರು ೩೪ ಎಕರೆ ೮ ಗುಂಟೆ ಜಮೀನನ್ನು ಸ್ವಾಧೀನ ಪಡಿಸಲು ಕ್ರಮ ಕೈಗೊಂಡಿದೆ ಮಂಡಳಿಯಿಂದ ಪ್ರಸ್ತಾವನೆ ಬಂದನಂತರ ಪರಿಶೀಲಿಸಲಾಗುವುದು.

ರೆವಿನ್ಯೂ ಸೈಟುದಾರರ ಸಮಸ್ಯೆಗಳು

೫೪೯. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಬೆಂಗಳೂರು ಅಭಿವೃದ್ಧಿ, ವಾರ್ತಾ ಪ್ರವಾಸೋದ್ಯಮ ಮಂತ್ರಿಗಳು

ಅ) ಬೆಂಗಳೂರಿನ ಸುತ್ತಲೂ ಜಮೀನನ್ನು ಕೊಂಡು ಸೈಟುಗಳನ್ನು ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗೂ ಅಭಿವೃದ್ಧಿ ಪ್ರಾಧಿಕಾರವು ವಶಪಡಿಸಿಕೊಳ್ಳಲು ಯೋಜಿಸಿರುವ ಜಮೀನು ಎಷ್ಟು ?

ಆ) ಹೀಗೆ ಸೈಟುಗಳನ್ನು ಕೊಂಡವರು (ರೆವಿನ್ಯೂ ಸೈಟುದಾರರು) ಅದನ್ನು ತಮಗೆ ಮಾಡಿಸಿ ಕೊಡಬೇಕೆಂದು ಸರ್ಕಾರದವರನ್ನು ಅನೇಕ ಬಾರಿ ಮೇಲಿನಿಂದ ಮೇಲೆ ಒತ್ತಾಯಪಡಿಸುತ್ತಿರುವುದು ನಿಜವೇ ?